## ಬಿ.ಎಸ್ಸಿ ಮತ್ತು
## ಎಂ.ಎಸ್ಸಿ (ಸಂಯೋಜಿತ ೫ ವರ್ಷಗಳ ಪದವಿ)
# ಮೊದಲನೇ ಸೆಮಿಸ್ಟರ್



# ಪರಿವಿಡಿ


## I.ಕಾವ್ಯಭಾಗ

೧. ಸಾಹಸಧನಂ ದುರ್ಯೋಧನಂ – ರನ್ನ ೧–೮
೨. ಬೆಳಗೆ ಕನ್ನಡಿಯೆನಿಸಿತ್ತಯ್ಯಾ – ವಚನಕಾರರು ೯–೧೨
೩. ಚಿಗರಿಗಂಗಳ ಚೆಲುವಿ – ದ.ರಾ. ಬೇಂದ್ರೆ ೧೩–೧೬
೪. ಕುರಿಗಳು, ಸಾರ್, ಕುರಿಗಳು – ಕೆ.ಎಸ್. ನಿಸಾರ್ ಅಹಮದ್ ೧೭–೨೧

## II . ಕಥಾಸಾಹಿತ್ಯ

೧. ಮೋಚಿ – ಭಾರತೀಪ್ರಿಯ ೨೨–೩೦
೨. ನಿರಾಕರಣೆ – ವೀಣಾ ಶಾಂತೇಶ್ವರ ೩೧–೩೯
೩. ಕೂರ್ಮಾವತಾರ – ಕುಂ.ವೀರಭದ್ರಪ್ಪ ೪೦–೫೫

## III .ಜಾನಪದ

೧. ನಾಲ್ವರು ಜಾಣರು – ಜನಪದ ಕಥೆ ೫೬–೬೪
೨. ಮೈಸೂರು ದೊರೆ ಕಥೆ – ಜನಪದ ಕಥನಗೀತೆ ೬೫–೬೯
೩. ಬೆಳ್ದಿಂಗ್ಳಪ್ಪನ ಪೂಜೆ – (ಲೇ.) ಅಗ್ರಹಾರ ಕೃಷ್ಣಮೂರ್ತಿ ೭೦–೭೭

## IV . ಲೇಖನ ವೈವಿಧ್ಯ

೧. ಒಂದು ಬೈಸಿಕಲ್ ಬೆಳಗ್ಗೆ – ಪಿ. ಲಂಕೇಶ್ ೭೮–೮೪
೨. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು – ಸಾರಾ ಅಬೂಬಕರ್ ೮೫–೯೬
೩. ಇಲ್ಲಿ ಯಾರು ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ....
– ಕೃಪಾಕರ, ಸೇನಾನಿ ೯೭–೧೦೮

# I ಕಾವ್ಯಭಾಗ

## ೧. ಸಾಹಸಧನಂ ದುರ್ಯೋಧನಂ

– ರನ್ನ

**ಆಶಯ :**

ಹಳೆಗನ್ನಡ ಚಂಪೂಕಾವ್ಯಗಳಲ್ಲಿ ಪ್ರತಿನಾಯಕನನ್ನು ಉದಾತ್ತೀಕರಿಸುವ ಒಂದು ಪರಂಪರೆ ವಿಶೇಷವಾಗಿ ರೂಪುಗೊಂಡಿತು. ಪಂಪನ ಕರ್ಣ, ರನ್ನನ ದುರ್ಯೋಧನ, ನಾಗಚಂದ್ರನ ರಾವಣ ಮುಂತಾದವರನ್ನು ಕೇವಲ ಖಳರನ್ನಾಗಿ ಮಾತ್ರ ಚಿತ್ರಿಸದೆ, ಅವರ ಮಾನವೀಯತೆಯ ಮುಖಗಳನ್ನು ಇಲ್ಲಿ ಅನಾವರಣಗೊಳಿಸಿರುತ್ತಾರೆ. ಹೀಗೆ ಇಂಥ ಪ್ರತಿನಾಯಕರ ಬಹುಮುಖಿ ಚಿತ್ರಣಗಳನ್ನು ನೀಡುವ ಪ್ರಕ್ರಿಯೆಯಲ್ಲಿ ನಮ್ಮ ಕವಿಗಳ ಸ್ವೋಪಜ್ಞತೆಯನ್ನು ಗುರ್ತಿಸಬಹುದು. ಯಾರ ವ್ಯಕ್ತಿತ್ವವೂ ಪೂರ್ಣ ಒಳ್ಳೆಯದೂ ಅಲ್ಲ, ಪೂರ್ಣ ಕೆಟ್ಟದ್ದೂ ಅಲ್ಲ. ಎರಡರ ಮಿಶ್ರಣ. ಒಳಿತು – ಕೆಡಕುಗಳ ಪ್ರಮಾಣದಲ್ಲಿ ಭಿನ್ನತೆ ಇರಬಹುದು. ಹಾಗಾಗಿ ಕೆಡುಕಿನ ನಡುವೆಯೂ ಇರುವ ಒಳಿತನ್ನು ಇಲ್ಲಿ ಗಮನಿಸಲಾಗುತ್ತದೆ.

ದ್ವೇಷಕ್ಕೆ ಸಿಡಿಯುವ, ಪ್ರೀತಿಗೆ ಕರಗುವ ಸಾಹಸಧನ ದುರ್ಯೋಧನನ ಎರಡು ಮುಖಗಳು ಈ ಪದ್ಯದಲ್ಲಿದೆ. ಯುದ್ಧದ ಭೀಕರ ನೋಟಗಳಾಗಲಿ, ಹದಿನೆಂಟು ಅಕ್ಷೋಹಿಣಿ ಸೈನ್ಯದ ಮರಣವಾಗಲಿ, ಎಲ್ಲ ಪ್ರೀತಿಪಾತ್ರರ ವಿಯೋಗವಾಗಲಿ, ಸಾವಿನತ್ತಲೆ ಹೆಜ್ಜೆ ಹಾಕುತ್ತಿರುವ ದುರ್ಯೋಧನನಲ್ಲಿ ಪಾಂಡವರ ಬಗೆಗಿನ ದ್ವೇಷವನ್ನು ಕಡಿಮೆ ಮಾಡುವುದಿಲ್ಲ. ಭೀಮನ ಗದೆಯ ಹೊಡೆತಗಳನ್ನು ಸಹಿಸಬಲ್ಲ ಶಕ್ತಿಶಾಲಿ ದುರ್ಯೋಧನ, 'ಕಂದಾ' ಎನ್ನುವ ತಾಯಿಯ ಪ್ರೀತಿಯನ್ನು ಎದುರಿಸುವ ಶಕ್ತಿಯಿಲ್ಲದೆ ಮೂರ್ಛಿತನಾಗುವ ಪರಿ, ಧೀರೋದ್ಧತ ಎನೆನಿಸಿಕೊಂಡಿರುವವನನ್ನು ಧೀರೋದಾತ್ತನನ್ನಾಗಿ ಮಾಡುತ್ತದೆ. ಇಲ್ಲಿ ಆತ ದುರ್ಯೋಧನನಷ್ಟೇ ಅಲ್ಲ, ಸುಯೋಧನನೂ ಆಗಿದ್ದಾನೆ.



ಸ್ಥಿರ ಸತ್ಯವ್ರತಿಯೆಂದು ಧರ್ಮರುಚಿಯೆಂದಾ ಧರ್ಮಪುತ್ರಂ ದಯಾ
ಪರನೆಂದೆಲ್ಲರ ಪೇೞ್ದ ಮಾತು ಪುಸಿಯಾಯ್ತೀ ಕಾರ್ಮುಕಾಚಾರ್ಯನಂ
ಗುರುವಂ ಬ್ರಾಹ್ಮಣನಂ ತೊದಳ್‌ನುಡಿದು ಕೊಂದಾಗಳ್ ಮೃಷಾ ಪಾತಕಂ
ಪರಮೆಂಬೀ ನುಡಿಯಿಂ ಪೃಥಾಪ್ರಿಯಸುತಂ ಪಾಪಕ್ಕೆ ಪಕ್ಕಾಗನೇ

ವನಿತೆಯ ಕೇಶಮಂ ಸಭೆಯೊಳೆನ್ನನುಜಂ ತೆಗೆವಲ್ಲಿ ಗಂಡನಾ
ಗನೆ ಭಗದತ್ತನಾನೆ ಬರಿಯೆಲ್ವುಡಿವನ್ನೆಗಮೊತ್ತೆ ಗಂಡನಾ
ಗನೆ ಕೊಲಲೊಲ್ಲದಂಗಪತಿ ಬಿಲ್ಲೊಳೆ ಕೋದೆಱೆವಲ್ಲಿ ಗಂಡನಾ
ಗನೆ ಕುರುಬಾಲ ಸಂಹರಣ ಮಾತ್ರದೆ ಮಾರುತಿ ಗಂಡನಾದನೇ

ಒಡವುಟ್ಟಿದರಂ ಕೊಂದವ
ರಡಗಂ ತಿಂದವರ ನೆತ್ತರಂ ಬಗಸೆರೆಯೊಳ್
ಕುಡಿವೀ ನಿಸ್ತ್ರಿಂಶತೆಯಂ
ಹಿಡಿಂಬೆಯಂ ಪೊರ್ದಿ ಕಲ್ತನಾಗನೆ ಭೀಮಂ

ಎನಗಾ ಜೂದಿನೊಳಗ್ರಜಾನುಜಸಮೇತಂ ಗಂಡುದೊಳ್ತಾಗಿ ಕಾ
ನನದೊಳ್ ವಲ್ಕಲಧಾರಿಯಾಗಿ ಹರನೊಳ್ ದಿವ್ಯಾಸ್ತ್ರಮಂ ಬೇಡೆ ಬೆ
ಳ್ತನದಿಂ ತಾಪಸನಾಗಿ ಪೇಡಿಯೆನೆ ಮತ್ಸ್ಯಾವಾಸದೊಳ್ ವಾಸುದೇ
ವನ ನಂಟಂ ನಟನಾಗಿ ಬಾರದ ಭವಂ ಬಂದಂ ಪೃಥಾನಂದನಂ

ಗುರುವಂ ಪ್ರೋಜ್ಝಿತಚಾಪನಂ ಪುಸಿದು ಕೊಂದಾ ಬೀರಮಂ ಭೀಷ್ಮರಂ
ಶರಶಯ್ಯಾಗತರಂ ಕಱುತ್ತು ಗುಱಿಯೆಚ್ಚಾ ಪೊಚ್ಚಱಿಂ ಕರ್ಣನಂ
ವಿರಥಜ್ಯಾಯುಧನೆನ್ನದೆಚ್ಚು ತಲೆಗೊಂಡಾ ಶೌರ್ಯಮಂ ಪಾಂಡುಪು
ತ್ರರೆ ಬಲ್ಲರ್ ಮೆಱೆಯಲ್ಕೆ ಸಾಹಸಧನಂ ದುರ್ಯೋಧನಂ ಬಲ್ಲನೇ

ಸಭೆಯೊಳ್ ತಮ್ಮಯ ಪಕ್ಕದೆನ್ನನುಜನಾ ಪಾಂಚಾಲಿಯಂ ಪಂಚವ
ಲ್ಲಭೆಯಂ ಮೋದೆಯುಮಲ್ಲಿ ಮಿಳ್ಮಿಳನೆ ನೋಡುತ್ತಿರ್ದ ಬಲ್ಲಾಳ್ಗಳಿ
ಲ್ಲಿ ಭರಂಗೆಯ್ದಪರೀ ಪರಾಕ್ರಮಮುಮೀ ಪೆರ್ಮಾತುಮೀ ಗಂಡುಮೀ
ಸುಭಟಾಲಾಪಮುಮೆಲ್ಲಮಾ ನೃಪಸುತರ್ಗಂದೆಲ್ಲಿ ಪೊಕ್ಕಿರ್ದುದೋ

॥ವ॥ ಎಂದು ಧೃತರಾಷ್ಟ್ರನಂದನಂ ಧರ್ಮನಂದನನುಮಂ ವಾಯುನಂದನನುಮಂ ಸಂಕ್ರಂದನನಂದನನುಮಂ ಅಶ್ವಿನೀನಂದನರುಮಂ ನಿರಾಕರಣಂಗೆಯ್ದು ಅನಿತಱೊಳಂ ಮಾಣದೆ

ಪುರುಷರ್ ಮೂವರೊಳೊರ್ಬನೆಂಬರ್ ಅಸುರ ಪ್ರಧ್ವಂಸಿಯೆಂಬರ್ ಜಗ
ದ್ಗುರುವೆಂಬರ್ ಪೆಱರ್ಗೇಕೆ ತೇರನೆಸಪಂ ಧರ್ಮಾನುಜಂಗೇಕೆ ಕಿಂ
ಕರನಾದಂ ಕರವೇಟಿಯಾದನದರಿಂ ಸೂತಂ ಭಟಂ ಪೇಟಿಯೆಂ
ಬರ ಮಾತೊಪ್ಪುಗುಮಾದಿದೇವನೆನಿಸಲ್ ಕೃಷ್ಣಂಗದೆಂತೊಪ್ಪುಗುಂ

॥ವ॥ ಎನೆ ಸಂಜಯನಂಜದೆ ಮಾರ್ಕೊಂಡು

ಪ್ರತಿಕೂಲ ದೈವನಯ್ ನೀಂ
ಪ್ರತಿನೃಪರನುಕೂಲ ದೈವರಸಹಾಯನೆ ನೀಂ
ಪ್ರತಿನೃಪರಸಹಾಯ ಜಿತ
ಪ್ರತಿಬಲರದಟಿಂದನರ್ಥತಂ ವಾಕ್ಯಾರ್ಥಂ

॥ವ॥ ಎಂದು ನುಡಿದ ಸಂಜಯನ ನುಡಿಗೆ ದುರ್ಯೋಧನಂ ನಿರ್ವೈಸಿ

ಸಮರಜಯಂ ದೈವಾಯ
ತ್ತಮದಱಿನಾ ಪುರುಷಾಕಾರಮೆಮಗಾಯ್ತಿೀಗಳ್
ಯಮನಂದನಾದಿಗಳೊಳೊಂ
ದೆ ಮೆಯ್ಯೊಳಾಂತಿಱಿವೆನೆನ್ನ ಛಲವಂ ಮೆಱೆವೆಂ

ಎನಗಿರ್ವರುಮೆರಡುಂ ತೋ
ಳೆನಗಿರ್ವರುಮೆರಡು ಕಣ್ಗಳನ್ನರೆ ಯುವರಾ
ಜನುಮಂಗರಾಜನುಂ ಪೋ
ರೆನೆ ಸಂಜಯ ಮತ್ತಮೆನಗೆ ಮಾನಸವಾಟೀ

ಎನಗೆ ಮನಮಿಂದು ಶೂನ್ಯಂ
ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾ
ವನಿ ಶೂನ್ಯಮಾಯ್ತು ದುಶ್ಶಾ
ಸನನಿಲ್ಲದೆ ಕರ್ಣನಿಲ್ಲದಾನೆಂತಿರ್ಪೆಂ



ಬಾಂಧವರನಿಱಿಸಿ ಸರಸಿಜ
ಬಾಂಧವ ತನಯನುಮನೆನ್ನ ತಮ್ಮನುಮಂ ನ
ಮ್ಮಂಧನರೇಂದ್ರನ ಮೊಗಮಂ
ಗಾಂಧಾರಿಯ ಮೊಗಮನಾವ ಮೊಗದೊಳೆ ನೋೞ್ಪೆಂ

॥ವ॥ ಎಂಬನ್ನೆಗಂ ಗಾಂಧಾರಿಯುಂ ಧೃತರಾಷ್ಟ್ರನುಂ ಶೋಕಾಕುಲೀಕೃತ ಚಿತ್ತರಾಗಿ ತಮ್ಮ ಮಗನನಾರಯ್ಯಲುಂ ಮನಃಕ್ಷತಮನಾಱಿಸಲುಮೆಂದು ಅಱಿಸುತ್ತುಂ ಬಂದು

ಪಡೆ ಪನ್ನೊಂದಕ್ಷೋಹಿಣಿ–
ಗೊಡೆಯನೆ ಮೂರ್ಧಾಭಿಷಿಕ್ತನಯ್ ಮೂಱುಂಬೆ
ಳ್ಗೊಡೆಯ ನಡುವಿರ್ಪ ನೀನಿ
ರ್ದೆಡೆಯುಮನ್ಎಮಗಱಿಯದಂತುಟಾದುದೆ ಮಗನೇ

॥ವ॥ ಎಂದು ಪಟಿಯಿಸುತ್ತುಂ ಬರ್ಪ ಗುರುಜನದ ಸರಮಂ ಸಂಜಯನಱಿದು ಕರಕಮಲಮುಕುಳಿತಾಂಜಲಿಯಾಗಿ ದೇವಾ ನಿನ್ನಲ್ಲಿಗೆ ನಿಜಜನನೀಜನಕರ್ ಅಱಿಸುತ್ತುಂ ಬಂದರ್ ಎಂಬುದುಂ ಉದ್ಧೃತಗೋತ್ರಾಭಿಮುಖಂ ವಜ್ರಾಘಾತಮಾದಂತೆ ಸಿಗ್ಗಾಗಿ ತಲೆಯಂ ಬಾಗಿ

ಅರಿಭೂಪಾಲರನಿಕ್ಕಿ ಗೆಲ್ದೊಸಗೆಯಿಂ ತೂರ್ಯಸ್ವನಂ ಪೊಣ್ಮೆ ಸೋ
ದರರುಂ ಮಕ್ಕಳುಮಾಪ್ತರುಂ ಬೆರಸು ಬಂದಾನಂದದಿಂ ಕಾಣ್ಬೆನೆಂ
ದಿರಲಿಂತಾಯ್ತು ವಿಧಾತ್ರ ಮದ್ಗುರುಗಳಂ ದುಃಖಾತ್ಮರಂ ಶೋಕತ
ಪ್ತರರಂ ಮೆಯ್ಯೊಳೆ ಬೀೞುವಶ್ರುಮುಖರಂ ಕಾಣ್ಬಂತುಟಂ ಮಾಡಿದಯ್

ಕಂದ ನಿಜಾನುಜರೆಲ್ಲಿದ
ರೆಂದೆನ್ನಂ ಜನನಿ ಬಂದು ಬೆಸಗೊಂಡೊಡದೇ
ನೆಂದು ಮಱುಮಾತುಗುಡುವೆಂ
ಕೊಂದರ್ ಕೌಂತೇಯರೆಂದು ಬಿನ್ನೈಸುವೆನೋ

ಶೋಕಂ ಮಿಗೆ ಫಣಿರಾಜಪ
ತಾಕಂ ವಿಗಳಿತವಿವೇಕನವಿರಳಬಾಷ್ಪೋ
ದ್ರೇಕಂ ಹಾ ದುಶ್ಶಾಸನ
ಹಾ ಕರ್ಣಾ ಎನುತುಮಂತೆ ಮೂರ್ಛೆಗೆ ಸಂದಂ

## ಕವಿ ಪರಿಚಯ

**ರನ್ನ :** ಹಳೆಗನ್ನಡ ಚಂಪೂ ಕಾವ್ಯ ಪರಂಪರೆಯಲ್ಲಿ 'ವಾಗ್ದೇವಿಯ ಭಂಡಾರದ ಮುದ್ರೆಯನೊಡೆದ' ರನ್ನ ಹೆಸರುವಾಸಿಯಾದವನು. ಕಾಲ ೧೦ನೇ ಶತಮಾನ. ಸ್ಥಳ ಇಂದಿನ ಮುಧೋಳ. ಜೈನಧರ್ಮಿ. ಆದಿಕವಿ ಪಂಪನನ್ನು ಅನುಸರಿಸಿ ಕಾವ್ಯರಚನೆ ಮಾಡಿದರೂ, ಸ್ವಂತಿಕೆಯಿಂದ ಪ್ರಸಿದ್ಧನಾಗಿರುವ ಕವಿ. ಜೈನ ತೀರ್ಥಂಕರ ಅಜಿತನಾಥನ ಕಥೆಯನ್ನು ಹೇಳುವ ಅಜಿತತೀರ್ಥಂಕರ ಪುರಾಣ (ಕ್ರಿ.ಶ. ೯೯೩) ಅವನು ರಚಿಸಿರುವ ಧಾರ್ಮಿಕ ಕಾವ್ಯ. ಮತ್ತೊಂದು ಕೃತಿ ಸಾಹಸಭೀಮ ವಿಜಯಂ (ಕ್ರಿ.ಶ. ೯೯೦) 'ಗದಾಯುದ್ಧ'ವೆಂದೇ ಜನಪ್ರಿಯವಾಗಿದೆ. ಭೀಮನೊಂದಿಗೆ ತನ್ನ ಆಶ್ರಯದಾತನಾಗಿದ್ದ ಇರಿವಬೆಡಂಗ ಸತ್ಯಾಶ್ರಯವನ್ನು ಸಮೀಕರಿಸಿ ಹೇಳಿರುವ ರನ್ನ, ಈ ಕೃತಿಯಲ್ಲಿ ಪಂಪಭಾರತದ ಎರಡು ಆಶ್ವಾಸಗಳನ್ನೆ ತನ್ನ ಸಂಪೂರ್ಣಕಾವ್ಯವಾಗಿ ವಿಸ್ತರಿಸಿಕೊಂಡಿದ್ದಾನೆ. ಭೀಮ – ದುರ್ಯೋಧನರ ಗದಾಯುದ್ಧದ ಹಿನ್ನೆಲೆಯಲ್ಲಿ ಸಿಂಹಾವಲೋಕನ ಕ್ರಮದಿಂದ ಭಾರತ ಕಥೆಯನ್ನು ಪರಿಚಯಿಸಲಾಗಿದೆ. ಕಾವ್ಯದ ಓಜಸ್ಸಿಗೂ, ಉಜ್ವಲವಾದ ಮಾತುಗಾರಿಕೆಗೂ, ಪರಿಣಾಮಕಾರಿಯಾದ ನಾಟಕೀಯತೆಗೂ ಹೆಸರಾಗಿರುವ ರನ್ನ ಕನ್ನಡದ 'ರತ್ನತ್ರಯ'ರಲ್ಲಿ ಒಬ್ಬ, 'ಕವಿಚಕ್ರವರ್ತಿ'ಯೂ ಹೌದು.

**ಕಠಿಣ ಪದಗಳ ಅರ್ಥ :**

೧. ಧರ್ಮರುಚಿ = ಧರ್ಮದಲ್ಲಿ ಆಸಕ್ತಿಯುಳ್ಳವನು; ಕಾರ್ಮುಕಾಚಾರ್ಯ= ದ್ರೋಣ, ತೊದಳ್‌ನುಡಿದು=ಸುಳ್ಳುಹೇಳಿ; 'ಮೃಷಾಪಾತಕಂಪರಂ'=ಸುಳ್ಳು ಮಹಾಪಾತಕ; ಇದೊಂದು ಸಂಸ್ಕೃತದ ನುಡಿಗಟ್ಟು. ಪಕ್ಕಾಗನೇ= ಗುರಿಯಾಗುವುದಿಲ್ಲವೆ?

೨. ವನಿತೆ=ಹೆಣ್ಣು, ದ್ರೌಪದಿ; ಗಂಡಂ ಆಗನೆ=ವೀರನಾಗದೆ ಹೋದನೆ– (ಎಂದರೆ, ಅವನಲ್ಲಿ ಪೌರುಷವಿದ್ದ ಪಕ್ಷದಲ್ಲಿ ಅಂಥ ಸಮಯದಲ್ಲಿ ಏಕೆ ಸುಮ್ಮನಿದ್ದ?) ಬರಿಯ ಎಲ್ವು ಉಡಿವನ್ನೆಗಂ=ಪಕ್ಕೆಯ ಎಲುಬು ಮುರಿಯುವ ತನಕ; ಭಗದತ್ತನ ಆನೆ ಒತ್ತೆ=ಕೌರವ ಪಕ್ಷದ ಭಗದತ್ತನು ಏರಿದ್ದ ಸುಪ್ರತೀಕವೆಂಬ ಭಯಂಕರವಾದ ಆನೆಯೊಡನೆ ಭೀಮನು ಸೆಣಸುತ್ತಾನೆ. ಯಾರನ್ನು ಯಾರೂ ಸೋಲಿಸಲು ಆಗುವುದಿಲ್ಲ. ಕಡೆಗೆ ಅರ್ಜುನನು ಭೀಮನ ಸಹಾಯಕ್ಕೆ ಬಂದು ಭಗದತ್ತನನ್ನೂ, ಸುಪ್ರತೀಕವನ್ನೂ ಸಂಹರಿಸುತ್ತಾನೆ; ಅಂಗಪತಿ=ಕರ್ಣ; ಕೋದು=ಪೋಣಿಸಿ, ಚುಚ್ಚಿ; ಕೊಲಲೊಲ್ಲದೆ... ಎಟೆವಲ್ಲಿ=ಭಾರತ ಯುದ್ಧದಲ್ಲಿ ಒಮ್ಮೆ ಭೀಮ, ಕರ್ಣನ ಬಾಣಗಳಿಂದ ನೊಂದು ರಥದಲ್ಲಿ ಮೂರ್ಛಿತನಾಗಿ ಬೀಳುತ್ತಾನೆ. ಅವನ ಕೊರಳಿಗೆ ಕರ್ಣ ತನ್ನ ಬಿಲ್ಲನ್ನು ಕೋದು ಎತ್ತುತ್ತಾನೆ. ಆದರೆ ತಾಯಿಗೆ ಕೊಟ್ಟ ಮಾತನ್ನು ನೆನೆದು ಅವನನ್ನು ಕೊಲ್ಲದೆ ಬಿಡುತ್ತಾನೆ; ಕುರುಬಾಲ=ಕುರುವಂಶದ ಬಾಲಕರು, ದುರ್ಯೋಧನನ ತಮ್ಮಂದಿರು; ಮಾರುತಿ=ಭೀಮ



೩. ಒಡವುಟ್ಟಿದರಂ = ಕೌರವರೂ ಭೀಮನಿಗೆ ಸೋದರ ಸಮಾನವೆ. ಅಡಗು=ಮಾಂಸ, ಬಗಸೆರೆ=ಬೊಗಸೆ, ನಿಸ್ತ್ರಿಂಶತೆ=ನಿಷ್ಕರುಣೆ; ಪೊರ್ದಿ=ಹೊಂದಿ. (ಸೋದರರನ್ನು ಕೊಂದು, ದುಶ್ಯಾಸನನ ರಕ್ತವನ್ನು ಹೀರಿ, ಮಾಂಸವನ್ನು ತಿಂದಿದ್ದು ನಿಜವಾಗಿ ರಾಕ್ಷಸ ಕೃತ್ಯ. ಹಿಡಿಂಬೆಯ ಕೈಹಿಡಿದೇ ಇದನ್ನು ಭೀಮ ಕಲಿತಿರಬೇಕು ಎಂದು ತಾತ್ಪರ್ಯ.)

೪. ಜೂದು=ಜೂಜು, ದ್ಯೂತ, ಗಂಡುದೊಳ್ತು=ದಾಸ, ವಲ್ಕಲ=ನಾರುಮಡಿ, ಬೆಳ್ಪನ=ಮರುಳುತನ, ಬೆಪ್ಪು, ಪೇಡಿ=ಹೇಡಿ, ನಪುಂಸಕ, ಮತ್ಸ್ಯಾವಾಸ=ಮತ್ಸ್ಯದೇಶದ ರಾಜನಾದ ವಿರಾಟನ ಅರಮನೆ, ಬಾರದ ಭವಂ ಬಂದಂ=ಹೊಂದಬಾರದ ದುಃಸ್ಥಿತಿಯನ್ನು ಹೊಂದಿದ. (ಅರ್ಜುನ ದಾಸನಾದದ್ದನ್ನೂ, ಬೃಹನ್ನಳೆಯಾದದ್ದನ್ನೂ, ತಪಸ್ವಿಯಾದದ್ದನ್ನೂ ದುರ್ಯೋಧನ ಉಪಹಾಸ ಮಾಡುತ್ತಿದ್ದಾನೆ.)

೫. ಪ್ರೋಜ್ಝಿತಚಾಪ=ಬಿಲ್ಲನ್ನು ಬಿಸುಟವನು, ದ್ರೋಣ. ಕಱುತ್ತು=ಕೋಪಗೊಂಡು, ಮತ್ಸರಿಸಿ, ಗುಱಿಯೆಚ್ಚ ಆ ಪೊಚ್ಚಱಿಂ=ಗುರಿಯಿಟ್ಟು ಹೊಡೆದ ಆ ಸ್ಫೂರ್ತಿಯನ್ನು, ವಿರಥಜ್ಯಾಯುಧಂಎನ್ನದೆ=ರಥವೂ, ಬಿಲ್ಲುಬಾಣಗಳೂ ಇಲ್ಲವೆಂಬುದನ್ನು ಗಣನೆಗೆ ತಂದುಕೊಳ್ಳದೆ, ತಲೆಗೊಂಡ=ಕೊಂದ, ('ದ್ರೋಣ, ಭೀಷ್ಮ, ಕರ್ಣರನ್ನು ಕೊಂದ ಬಗೆಗೆ, ಇಂಥ ಶೌರ್ಯಸ್ಫೂರ್ತಿಗಳನ್ನು ಪ್ರದರ್ಶಿಸುವುದು ತನಗೆ ಸಾಧ್ಯವಿಲ್ಲವೆಂಬ ದುರ್ಯೋಧನನ ತಿರಸ್ಕಾರೋಕ್ತಿ.')

೬. ಪಂಚವಲ್ಲಭೆ=ದ್ರೌಪದಿ (ಈ ವಿಶೇಷಣದಿಂದ ದುರ್ಯೋಧನನ ತಿರಸ್ಕಾರ ವ್ಯಕ್ತವಾಗುತ್ತದೆ.) ಮೋದು=ಹೊಡೆ, ಮಿಳ್ಮಿಳನೆ=ಮಿಳ ಮಿಳ ಎಂದು, ಸುಮ್ಮನೆ ಕಣ್ಣು ಬಿಟ್ಟುಕೊಂಡು; ಬಲ್ಲಾಳ್ಗಳು=ಶೂರರು, ಭರಂಗೆಯ್ದಪರ್=ಜೋರು ಮಾಡುತ್ತಾರೆ, ಪೆರ್ಮಾತು=ಭಾರಿಯ ಮಾತು. (ದ್ರೌಪದಿಯ ಬಗೆಗೆ ತಮ್ಮದು ತಪ್ಪಾಯಿತು ಎಂದು ಇಲ್ಲಿ ದುರ್ಯೋಧನನಿಗೆ ಅನಿಸುವುದಿಲ್ಲ.)

ವಚನ: ಸಂಕ್ರಂದನನಂದನ=ಇಂದ್ರನ ಮಗ, ಅರ್ಜುನ; ಅಶ್ವಿನೀನಂದನರು = ನಕುಲ, ಸಹದೇವ.

೭. ಪುರುಷರ್ ಮೂವರ್ = ತ್ರಿಮೂರ್ತಿಗಳು, ಬ್ರಹ್ಮ ವಿಷ್ಣು ಮಹೇಶ್ವರರು. ಪ್ರಧ್ವಂಸಿ = ಸಂಹಾರಕ, ಕರವೇಟಿ = ಕಡು ಹೇಡಿ

೮. ಪ್ರತಿನೃಪರ್=ಶತ್ರುರಾಜರು, ಪಾಂಡವರು, ಅಸಹಾಯ... ಬಲರ್=ಬೇರೊಬ್ಬರ ಸಹಾಯವಿಲ್ಲದೆ ಶತ್ರುಸೈನ್ಯವನ್ನು ಜಯಿಸಿದವರು. ಅನರ್ಥಕಂ ವಾಕ್ಯಾರ್ಥಂ=ಮಾತಿಗೆ ಮಾತನ್ನು ಬೆಳೆಸುವುದು ನಿಷ್ಪ್ರಯೋಜಕ.

ವಚನ: ನಿರ್ವ್ಯಸಿ=ಬೇಸರಗೊಂಡು.

೯. ಪುರುಷಕಾರ=ಪುರಷಪ್ರಯತ್ನ, (ವಿಜಯ ದೈವದ ಕೈಯಲ್ಲಿದ್ದರೆ ಹೋರಾಟ ನಮ್ಮ ಕೈಯಲ್ಲೇ ಇದೆ.) ಒಂದೆ ಮೆಯ್ಯೊಳ್=ಏಕಾಂಗಿಯಾಗಿ, ಆಂತಿಜೆವೆಂ=ಪ್ರತಿಭಟಿಸಿ ಯುದ್ಧ ಮಾಡುತ್ತೇನೆ. ಛಲ=ಹಠ.

೧೦. ಕರ್ಣದುಶ್ಯಾಸನರ ಮಾತು ಬಂದದ್ದರಿಂದ ದುರ್ಯೋಧನ ಭಾವೋದ್ರಿಕ್ತನಾಗುತ್ತಾನೆ. ಅತ್ಯಂತ ಪ್ರಿಯರಾದ ಇವರಿಗಾಗಿ ಶೋಕಿಸುತ್ತಾ, ತನ್ನ ಸಂಕಟದ ನುಡಿಗಳಿಂದ ಓದುಗರ ಹೃದಯವನ್ನು ಕರಗಿಸುತ್ತಾನೆ. ಯುವರಾಜನುಂ ಅಂಗರಾಜನುಂ = ದುಶ್ಯಾಸನ, ಕರ್ಣ. ಕಣ್ಗಳನ್ನರೆ = ಕಣ್ಣುಗಳಂಥವರೆ. ಪೋರೆನೆ=ಯುದ್ಧಮಾಡುವುದಿಲ್ಲ ಎನ್ನುವುದಾದರೆ, ಮಾನಸವಾಟೀ=ಮನುಷ್ಯನಂತೆ ಬದುಕಬಹುದೆ?

೧೧. ಬೀಡು=ಸೇನೆಯ ವಸತಿ

೧೨. ಇಜೆಸಿ=ಕೊಲ್ಲಿಸಿ, ನಮ್ಮ ಅಂಧನೃಪ=ಧೃತರಾಷ್ಟ್ರನ, ಆವಮೊಗದೊಳ್=ಯಾವ ಮುಖವನ್ನು ಇಟ್ಟುಕೊಂಡು

ವಚನ : ಆರಯ್=ವಿಚಾರಿಸು, ಹುಡುಕು, ಮನಃಕ್ಷತ = ಮನೋವ್ಯಥೆ ಆಜೆಸು=ಶಮನಗೊಳಿಸು

೧೩. ಮೂರ್ಧಾಭಿಷಿಕ್ತನಯ್=ರಾಜ್ಯಾಭಿಷೇಕ ಮಾಡಿಸಿಕೊಂಡವನು, ಮೂಱುಂಬೆಳ್ಗೊಡೆಯ = ಮೂರು ಶ್ವೇತಚ್ಛತ್ರಗಳ ಹಿಂದೆ ನೀನು ಚಕ್ರವರ್ತಿ ಚಿನ್ಹೆಗಳಿಂದ ಕೂಡಿ ಎಷ್ಟು ದೂರದಿಂದಲಾದರೂ ಗೋಚರಿಸುತ್ತಿದ್ದೆ; ಈಗ, ಆ ವೈಭವಗಳಿರಲಿ, ನೀನಿರುವ ಜಾಗ ಕೂಡ ನಮಗೆ ಗೊತ್ತಾಗದಂತೆ ಆಗಿಹೋಯಿತಲ್ಲ ಎಂದು ತಂದೆತಾಯಿಗಳು ಮರುಗುತ್ತಾರೆ.

ವಚನ: ಪಟಿಯಿಸು=ಪ್ರಲಾಪಿಸು, ಸರ=ಸ್ವರ, ಗೋತ್ರ=ವಂಶ, ಬೆಟ್ಟ, ಸಿಗ್ಗಾಗು=ನಾಚಿಕೆಪಟ್ಟು. (ತನ್ನ ವಂಶದವರ ಅಂದರೆ ಹಿರಿಯರ ಹೆಸರನ್ನು ಎತ್ತಿದ ಕೂಡಲೆ, ತಲೆಎತ್ತಿ ನಿಂತ ಬೆಟ್ಟಕ್ಕೆ ವಜ್ರಾಯುಧದ ಪೆಟ್ಟು ಬಿದ್ದಂತೆ, ದುರ್ಯೋಧನ ನಾಚಿಕೆಯಿಂದ ತಲೆತಗ್ಗಿಸಿದ ಎಂಬ ಭಾವ.)

೧೪. ಇಕ್ಕಿ=ಕೊಂದು, ಗೆಲ್ದ ಒಸಗೆ=ವಿಜಯದ ಶುಭವಾರ್ತೆ, ತೂರ್ಯಸ್ವನಂ ಪೊಣ್ಮೆ=ವಾದ್ಯಗಳು ಮೊರೆಯುತ್ತಿರಲು, ವಿಧಾತ್ರ=ಓ ವಿಧಿಯೇ, ಬೀಱುವ ಅಶ್ರುಮುಖರಂ=ಕಣ್ಣೀರು ಸುರಿಯುತ್ತಿರುವ ಮುಖವುಳ್ಳವರನ್ನು

೧೫. ಎಲ್ಲಿದರ್=ಎಲ್ಲಿದ್ದಾರೆ, ಬೆಸಗೊಂಡೊಡೆ=ಕೇಳಿದರೆ, (ಇಲ್ಲಿ 'ಕಂದ' ಎಂಬ ಅತಿಕೋಮಲವಾದ ಸಂಬೋಧನೆ ದುರ್ಯೋಧನನ ಶೋಕಕ್ಕೆ ಅತ್ಯಂತ



ಪೋಷಕವಾಗಿ ಕರುಣರಸವನ್ನು ಉಕ್ಕಿಸುತ್ತದೆ.) ಕೌಂತೇಯರ್=ಕುಂತಿಯ ಮಕ್ಕಳು. –ಈ ಪದಪ್ರಯೋಗವೂ ಅರ್ಥಪೂರ್ಣ.

೧೬. ಮಿಗೆ=ಮಿತಿಮೀರಲು, ಅವಿರಳ ಬಾಷ್ಪೋದ್ರೇಕಂ=ಉಕ್ಕಿಉಕ್ಕಿ ಕಂಬನಿ ಹರಿಸುತ್ತ. (ಕರ್ಣ, ದುಶ್ಯಾಸನರಿಬ್ಬರೂ ದುರ್ಯೋಧನನ ಹೃದಯವನ್ನು ಹೇಗೆ ತುಂಬಿದ್ದರೆಂಬುದಕ್ಕೆ ಇದೇ ನಿದರ್ಶನ.)

ಸ್ವೀಕೃತ ಮೂಲ : ಗದಾಯುದ್ಧ ಸಂಗ್ರಹ, ಸಂ : ತೀ.ನಂ.ಶ್ರೀಕಂಠಯ್ಯ.

**ಪ್ರಶ್ನೆಗಳು :**

೧. ಪಾಂಡವರನ್ನು ಕುರಿತು ದುರ್ಯೋಧನನ ತಿರಸ್ಕಾರ ಹೇಗೆ ವ್ಯಕ್ತವಾಗಿದೆ?

೨. ಕೌರವರ ವಿಜಯದ ಬಗ್ಗೆ ದುರ್ಯೋಧನನಿಗಿದ್ದ ಕನಸಿಗೂ, ವಾಸ್ತವಕ್ಕೂ ಇರುವ ವ್ಯತ್ಯಾಸವೇನು?

೩. ದುಶ್ಯಾಸನ, ಕರ್ಣರ ಬಗೆಗೆ ದುರ್ಯೋಧನನ ಪ್ರೀತಿ ಹೇಗೆ ವ್ಯಕ್ತವಾಗಿದೆ?

೪. ತನ್ನ ಬದುಕು ಶೂನ್ಯವಾಗಿದೆಯೆಂದು ದುರ್ಯೋಧನ ಏಕೆ ಹೇಳುತ್ತಾನೆ?

೫. ಪ್ರಸ್ತುತ ಪದ್ಯಭಾಗದಿಂದ ಒಡಮೂಡುವ ದುರ್ಯೋಧನನ ವ್ಯಕ್ತಿತ್ವವನ್ನು ಚಿತ್ರಿಸಿ.

೬. ಮೂರ್ಖೆಹೋದರೂ ದುರ್ಯೋಧನ ಮೆಚ್ಚುಗೆಗೆ ಅರ್ಹನಾಗುವುದು ಏಕೆ? ತಿಳಿಸಿ.

೭. ಪಾಂಡವರ ಬಗೆಗಿನ ದುರ್ಯೋಧನನ ಆರೋಪಗಳು ಸುಳ್ಳೋ–ನಿಜವೋ? ಚರ್ಚಿಸಿ.

*

# ೨. ಬೆಳಗೆ ಕನ್ನಡಿಯೆನಿಸಿತ್ತಯ್ಯಾ

**– ವಚನಕಾರರು**

**ಆಶಯ :**

ಮನುಷ್ಯ ತನ್ನ ಬದುಕನ್ನು ಹಸನು ಮಾಡಿಕೊಳ್ಳುವುದು ಹೇಗೆ ಎನ್ನುವುದು ಅನಾದಿಯಿಂದಲೂ ಚರ್ಚೆಯಾಗುತ್ತಾ ಬಂದಿರುವ ಸಂಗತಿ. ಬೇಂದ್ರೆ ಹೇಳುವಂತೆ, 'ಬದುಕಿನೊಳಗೆ ಬಾಳುವುದು' ಮನುಷ್ಯನ ಆದಿಮ ಬಯಕೆ. ಅದನ್ನು ಸಾಧಿಸಿಕೊಳ್ಳುವ ಬಗೆ ಹೇಗೆ? ಇದೊಂದು ಸಿದ್ಧ ಅಥವಾ ದತ್ತ ಸಂಗತಿಯಲ್ಲ. ಇದಕ್ಕಾಗಿ ನಾವು ಸತತವಾಗಿ ಪ್ರಯತ್ನಿಸಬೇಕು. ಮೂಲತಃ ಸ್ವಾರ್ಥದ್ದೂ, ದುರಾಸೆಯದ್ದೂ ಆದ ನಮ್ಮ ಮನಸ್ಥಿತಿಯನ್ನು ಅದರ ಕುಬ್ಜತೆಯಿಂದ ಪಾರು ಮಾಡಿಕೊಳ್ಳುತ್ತಾ, 'ಬದುಕು–ಬದುಕಗೊಡು, ಎನ್ನುವ ಸ್ಥಿತಿಗೆ, ಎತ್ತರಕ್ಕೆ ಮನುಷ್ಯರು ಏರಬೇಕು. ಇದು ಸಾಧ್ಯವಾಗುವುದು ಮಾನವೀಯತೆಯಿಂದ, ತರತಮಗಳ ವಿವೇಚನೆಯಿಂದ, ಅಗಾಧವಾದ ಜೀವ ಪ್ರೀತಿಯಿಂದ. ಎಲ್ಲಕ್ಕಿಂತ ಹೆಚ್ಚಾಗಿ ಮನುಷ್ಯತ್ವದ ಘನತೆಯಿಂದ. ಬದುಕಿನ ಬಗೆಗಿನ ನಂಬಿಕೆ, ಗೌರವ ಮತ್ತು ಪ್ರೀತಿಗಳು ಇದನ್ನು ಸಾಧ್ಯವಾಗಿಸುತ್ತವೆ. ಬದುಕೊಂದು ವರ. ಅದನ್ನು ಸಾರ್ಥಕವಾಗಿಸಿಕೊಳ್ಳಬೇಕಾದ್ದು ನಮ್ಮ ಜವಾಬ್ದಾರಿ.

ಉಂಬ ಬಟ್ಟಲು ಬೇರೆ ಕಂಚಲ್ಲ –ನೋಡುವ ದರ್ಪಣ
ಬೇರೆ ಕಂಚಲ್ಲ – ಭಾಂಡ ಒಂದೇ ಭಾಜನ ಒಂದೇ
ಬೆಳಗೆ ಕನ್ನಡಿಯೆನಿಸಿತ್ತಯ್ಯಾ
ಅರಿದಡೆ ಶರಣ – ಮರೆದಡೆ ಮಾನವ
ಮರೆಯದೆ ಪೂಜಿಸು ಕೂಡಲ ಸಂಗಮನ

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?



ತನುವಿನಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ

ನೆರೆ ಕೆನ್ನೆಗೆ, ತೆರೆ ಗಲ್ಲಕೆ ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ
ಕಾಲ ಮೇಲೆ ಕೈಯನೂರಿ, ಕೋಲ ಹಿಡಿಯದ ಮುನ್ನ
ಮುಪ್ಪಿಂದ ಒಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ
ಪೂಜಿಸು ಕೂಡಲಸಂಗಮದೇವನ

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

ಏನು ಬಂದಿರಿ, ಹದುಳವಿದ್ದಿರೆ ಎಂದರೆ
ನಿಮ್ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದರೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಶಿರ, ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವಯ್ಯ?

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು
ಮನದ ಕೋಪ ತನ್ನ ಅರಿವಿನ ಕೇಡು
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರಮನೆಯ ಸುಡದು ಕೂಡಲಸಂಗಮದೇವ

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗೆ ಅಂಜಿದಡೆಂತಯ್ಯ?

ಸಮುದ್ರದ ತಡಿಯಲೊಂದು ಮನೆಯಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ?
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ–ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಕೊಟ್ಟಕುದುರೆಯನೇರಲರಿಯದೆ ಮತ್ತೊಂದು ಕುದುರೆಯ
ನೇರ ಬಯಸುವವರು ವೀರರೂ ಅಲ್ಲ ಧೀರರೂ ಅಲ್ಲ
ಕಾರಣ–ನೆರೆ ಮೂರು ಲೋಕವೆಲ್ಲವೂ ಹಲ್ಲಣವ ಹೊತ್ತುಕೊಂಡು
ತೊಳಲುತೈದಾರೆ ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರು?

## ಕವಿ ಪರಿಚಯ

**ಬಸವಣ್ಣ :** ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ವಚನ ಚಳುವಳಿಯ ಕೇಂದ್ರವಾಗಿದ್ದವನು ಬಸವಣ್ಣ. ಬಿಜ್ಜಳ ದೊರೆಯ ಮಂತ್ರಿಯೂ ಆಗಿದ್ದ. ಜಾತಿ–ಮತಗಳ ತಾರತಮ್ಯಗಳಿಂದ ಮುಕ್ತವಾದ ಸಮಾನತೆಯ ಬದುಕಿಗಾಗಿ ಹಂಬಲಿಸಿ ಅದಕ್ಕಾಗಿ ಶ್ರಮಿಸಿದವನು. ಏಕಕಾಲಕ್ಕೆ ಪರಮ ಭಕ್ತನೂ, ಮಹಾನ್ ಕ್ರಾಂತಿಕಾರಿಯೂ ಆದವನು. ಅವನು ನಡೆಸಿದ ಆಂದೋಲನ ಕನ್ನಡನಾಡಿನ ಬದುಕಿನ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ನಕ್ಷೆಯನ್ನೆ ಬದಲಿಸಿತು. 'ಕೂಡಲಸಂಗಮದೇವ' ಎನ್ನುವ ಅಂಕಿತದಿಂದ ಇವನು ರಚಿಸಿರುವ ವಚನಗಳು ಕನ್ನಡ ಕಾವ್ಯಲೋಕವನ್ನು ಹಿಗ್ಗಿಸಿವೆ. ಮಾರ್ಗಕಾವ್ಯದ ಎದುರು ಜನವಾಣಿಯನ್ನು ಸಮರ್ಥ ಪ್ರತಿನಿಧಿಯಾಗಿ ನಿಲ್ಲಿಸಿದವನು ಬಸವಣ್ಣ. ಅಪ್ಪಟ ಮಾನವೀಯ ಸಮಾಜದ ರಚನೆಗಾಗಿ ತುಡಿದ, ದುಡಿದ ಶ್ರೇಯಸ್ಸು ಇವನದು.

**ಅಲ್ಲಮಪ್ರಭು :** ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಅಲ್ಲಮ ೧೨ನೇ ಶತಮಾನದವನು. ಮೊದಲಿಗೆ ಮದ್ದಲಿಗನಾಗಿದ್ದನೆಂಬ ಐತಿಹ್ಯವಿದೆ. ತನ್ನ ಪ್ರಖರ ಚಿಂತನೆ ಮತ್ತು ಬೌದ್ಧಿಕತೆಗಳಿಂದ ಇಡಿ ವಚನಚಳುವಳಿಯ 'ಶೂನ್ಯಸಿಂಹಾಸನಾಧೀಶ, ಎನಿಸಿಕೊಂಡವನು. 'ಗುಹೇಶ್ವರ' ಅವನ ವಚನಗಳ ಅಂಕಿತ. ಬೆಡಗಿನ ವಚನಗಳ ಕರ್ತೃವಾಗಿ ಖ್ಯಾತನಾಗಿದ್ದಾನೆ. ಅಲ್ಲಮ ಕನ್ನಡ ಕಾವ್ಯ ಪರಂಪರೆ ಮತ್ತು ಅನುಭಾವ ಪರಂಪರೆಯ ಸಿದ್ಧಿಯ ಶಿಖರ. ಇವನ ವಚನಗಳು ಈ ಪರಂಪರೆಗಳ ಸಮೃದ್ಧಿ ಮತ್ತು ಘನತೆಯನ್ನು ಹೆಚ್ಚಿಸಿವೆ. ವಚನ ಚಳುವಳಿಯ ಲೌಕಿಕ ಆಯಾಮಕ್ಕೆ ಅಧ್ಯಾತ್ಮದ ಆಯಾಮವನ್ನು ಒದಗಿಸಿ ಅಲ್ಲಮ ಅನನ್ಯನಾದವನು.



**ಅಕ್ಕಮಹಾದೇವಿ :** ಶಿವಮೊಗ್ಗ ಜಿಲ್ಲೆಯ ಉಡುತಡಿ ಗ್ರಾಮದ ಅಕ್ಕಮಹಾದೇವಿ ಕನ್ನಡದ ಮೊದಲ ಕವಿಯಿತ್ರಿ ಎನ್ನುವ ಖ್ಯಾತಿ ಪಡೆದವಳು. ೧೨ನೇ ಶತಮಾನದಲ್ಲಿ ನಡೆದ ಸಾಮಾಜಿಕ ಆಂದೋಲನದ ಸಂದರ್ಭದಲ್ಲಿ ತನ್ನ ಸಮಕಾಲೀನ ಶರಣರೆಲ್ಲರ ಗೌರವಾದರಗಳನ್ನು ಪಡೆದ ವಚನಕಾರ್ತಿ. ಚೆನ್ನಮಲ್ಲಿಕಾರ್ಜುನ ಅವಳ ಅಂಕಿತವೂ ಹೌದು, ಆರಾಧ್ಯ ದೈವವೂ ಹೌದು. ತನ್ನ ಕಾವ್ಯದಷ್ಟೆ ತನ್ನ ಬದುಕಿನ ಕ್ರಮಕ್ಕೂ ಪ್ರಸಿದ್ಧಳಾದವಳು ಅಕ್ಕ. ಸಾಮಾನ್ಯ ಸಂಸಾರದ ಪರಿಚಿತ ಮಾದರಿಯನ್ನು ಮೀರಿ ಆತ್ಮಸಂಗಾತಿಯಾದ ದೈವ ಚೆನ್ನಮಲ್ಲಿಕಾರ್ಜುನನ ಹಂಬಲದಲ್ಲೆ ಬದುಕಿದ ದಿಟ್ಟೆ. ಈ ಸಂಬಂಧದ ಮೂಲಕ ಗಂಡ ಮತ್ತು ದಾಂಪತ್ಯದ ಹೊಸ ಭಾಷ್ಯ ಬರೆದು, ಕನ್ನಡ ಕಾವ್ಯದ ಹೆಗ್ಗುರುತಾದವಳು. 'ಯೋಗಾಂಗ ತ್ರಿವಿಧಿ' ಎಂಬ ಕೃತಿಯನ್ನು ಸಹ ರಚಿಸಿದ್ದಾಳೆ.

**ಕಠಿಣ ಪದಗಳ ಅರ್ಥ :**

ಹಲ್ಲಣ – ಜೀನು, ಭಾಂಡ–ಪಾತ್ರೆ, ಭಾಜನ–ಪಾತ್ರೆ ಒಪ್ಪ–ಅಂಗ ಸೌಷ್ಠವ, ಸೌಂದರ್ಯ, ಐಸಿರಿ–ಸಂಪತ್ತು, ಹದುಳ–ಕುಶಲ, ಕುಳಿ–ಗುಂಡಿ.

**ಪ್ರಶ್ನೆಗಳು :**

೧. ಬದುಕು ಅಮೂಲ್ಯವಾದುದು ಎನ್ನುವುದನ್ನು ವಚನಕಾರರು ಹೇಗೆ ಪ್ರತಿಪಾದಿಸುತ್ತಾರೆ?

೨. ಸೌಜನ್ಯ ಮತು ಮಾನವೀಯ ಕಳಕಳಿಗಳು ಮುಖ್ಯ ಎನ್ನುವ ವಚನಕಾರರ ನಿಲುವನ್ನು ಚರ್ಚಿಸಿ.

೩. ಕೋಪ, ದಯೆ ಮತ್ತು ಆಸೆಯನ್ನು ಕುರಿತಂತೆ ವಚನಕಾರರ ವಿಚಾರಗಳೇನು? ತಿಳಿಸಿ.

೪. ಕೊಟ್ಟ ಕುದುರೆ ಎನ್ನುವುದು ಏನನ್ನು ಪ್ರತಿನಿಧಿಸುತ್ತದೆ ? ವಿಚಾರ ಮಾಡಿ.

೫. ಲೋಕದೊಳಗೆ ಹುಟ್ಟಿದ ಬಳಿಕ ಹೇಗೆ ಸಮಾಧಾನಿಯಾಗಿರುವುದು ಹೇಗೆಂದು ಅಕ್ಕ ತಿಳಿಸುತ್ತಾಳೆ?

೬. ಅಕ್ಕ ಹೇಳುವ ಲೋಕದ ಸ್ವರೂಪವೇನು?

*

# ೩. ಚಿಗರಿಗಂಗಳ ಚೆಲುವಿ

**– ದ.ರಾ. ಬೇಂದ್ರೆ**

**ಆಶಯ :**

"ಪ್ರಕೃತಿಗೆ ಮನುಷ್ಯರ ಆಸೆಗಳನ್ನು ಪೂರೈಸುವ ಶಕ್ತಿಯಿದೆ; ದುರಾಸೆಗಳನ್ನಲ್ಲ." – ಮಹಾತ್ಮ ಗಾಂಧಿ.

ಭೂಮಿ ಒಂದು ಅಪೂರ್ವ ಗ್ರಹ. ಇದೊಂದು ಅನೇಕ ಜೀವಸಂಕುಲಗಳನ್ನೊಳಗೊಂಡ, ಅಪಾರ ಜೀವ ಚೈತನ್ಯವುಳ್ಳ ವಿಸ್ಮಯ! ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಸಕಲ ಜೀವರಾಶಿಗಳನ್ನು ಪೊರೆದು, ಪೋಷಿಸುವ ಏಕಮಾತ್ರ ಆಕಾಶಕಾಯ. ನಮ್ಮ ಜನಪದರಿಗೆ ಅನ್ನದಾತೆ, ತಾಯಿ, ದೇವಿ. ಆದ್ದರಿಂದಲೇ ಅವರು ಬೆಳಗ್ಗೆ ಎದ್ದ ಕೂಡಲೇ 'ಎಳ್ಳು ಜೀರಿಗೆ ಬೆಳೆಯೊಳ ಭೂಮ್ತಾಯಿ'ಯನ್ನು ಗಳಿಗೆ ನೆನೆದು ಪೂಜಿಸುವುದು. ಇಂದು ಇಂತಹ ಭಾವನಾತ್ಮಕ ಸಂಬಂಧ ನಾಶವಾಗಿ ವ್ಯಾವಹಾರಿಕವಾಗಿ ನೋಡುವ ಪ್ರಕ್ರಿಯೆ ಆರಂಭವಾಗಿದೆ.

ಭೂಮಿ ಸೌಂದರ್ಯವನ್ನೇ ಮೈವೆತ್ತುಕೊಂಡ ಅಪ್ರತಿಮ ಚೆಲುವೆ. ಸೌಂದರ್ಯದ ಗಣಿ. ಈ ಚೆಲುವೆ ಅನೇಕ ಕವಿಗಳ ವರ್ಣನೆಗೂ ಪಾತ್ರಗಳಾಗಿದ್ದಾಳೆ. ಅವಳ ಚೆಲುವು ಮನುಷ್ಯರ ಕಣ್ಣು ಕುಕ್ಕಿರಬೇಕು! ಅದಕ್ಕಾಗಿಯೇ ಹೇಗಾದರೂ ಅವಳನ್ನು ಭೋಗಿಸುವ ಪಣ ತೊಟ್ಟಿರಬೇಕು!

ಇಂದು ವಿಶ್ವದ ಅನೇಕ ಚೆಲುವು, ವಿಸ್ಮಯಗಳನ್ನು ಸ್ವಲ್ಪಮಟ್ಟಿಗಾದರೂ ಅರ್ಥೈಸಲು ವಿಶ್ಲೇಷಿಸಲು ಸಾಧ್ಯವಾಗಿರುವುದು ಮನುಷ್ಯ ಜೀವಿಗೆ ಮಾತ್ರ. ಭೂಮಿಯಿಲ್ಲದೆ ತಾನಿಲ್ಲವೆಂಬ ಸತ್ಯ ಗೊತ್ತಿದ್ದೂ ಈ ಬುದ್ಧಿವಂತ ಪ್ರಾಣಿ ಅದನ್ನು ಬಳಸಿಕೊಳ್ಳುತ್ತಿರುವ ಹುಚ್ಚಾಟಕ್ಕೆ ಗಾಬರಿಯಾಗುತ್ತದೆ. ವಿಪರೀತದ ಗಣಿಗಾರಿಕೆ, ನದಿ, ಬೆಟ್ಟ, ಗುಡ್ಡ, ಕಾಡು, ಗಾಳಿ, ಮಣ್ಣು, ನೆಲ, ಆಕಾಶ... ಎಲ್ಲವನ್ನು ಎಗ್ಗಿಲ್ಲದೆ ಬೇಟೆಯಾಡುತ್ತಿದ್ದೇವೆ. ನಗರಗಳಲ್ಲಂತೂ ಕಡಿವಾಣವಿಲ್ಲದೆ ನಿರ್ಮಾಣಗೊಳ್ಳುತ್ತಿರುವ ಅಪಾರ್ಟ್‌ಮೆಂಟುಗಳು, ಫ್ಲೈ ಓವರ್‌ಗಳು, ಮೆಟ್ರೋ ಸಾರಿಗೆ ಕಾಮಗಾರಿಗಳು, ಮಲಿನಗೊಳ್ಳುತ್ತಿರುವ ನೀರು, ಗಾಳಿ, ಕಲುಶಿತಗೊಂಡು



ದುಃಖಿಸುತ್ತಿರುವ ಅಳಿದುಳಿದಿರುವ ಕೆಲವೇ ಕೆರೆಗಳು– ಇವೆಲ್ಲವು ವ್ಯವಸ್ಥೆಯ ದೂರದೃಷ್ಟಿಯ ಕೊರತೆಗೆ ಹಿಡಿದ ಕನ್ನಡಿಯಂತಿವೆ. ಅಂತರ್ಜಲಕ್ಕೂ ಕನ್ನ ಹಾಕಿರುವ ನಮಗೆ ಜಲ ತಜ್ಞರ, ವಿಜ್ಞಾನಿಗಳ, ಪರಿಸರವಾದಿಗಳ ಎಚ್ಚರಿಕೆಯ ಗಂಟೆಯ ಸದ್ದೂ ಕೇಳುತ್ತಿಲ್ಲ. ಪ್ರಾಕೃತಿಕ ಸಂಪತ್ತು ಮುಂದಿನ ಜನಾಂಗಕ್ಕೂ ಸೇರಿದ್ದೆನ್ನುವುದನ್ನು ಮರೆತಂತೆ ವರ್ತಿಸುತ್ತಿದ್ದೇವೆ; ಎಲ್ಲವನ್ನೂ ಬರಿದಾಗಿಸುತ್ತಿದ್ದೇವೆ.

ನಮ್ಮ ಸ್ವಾರ್ಥ, ದುರಾಸೆ, ದುರ್ವತನೆಗಳೆಲ್ಲವನ್ನೂ ಮೌನವಾಗಿ ಸಹಿಸಿ, ಮರುಗಿ, ಕೊರಗಿ, ತನ್ನೊಳಗೇ ಸಂಕಟಪಡುತ್ತಿರುವವಳು ಈ 'ಚಿಗರಿಗಂಗಳ ಚೆಲುವಿ'. ಇವಳ ಆರ್ತನಾದವನ್ನು ಕವಿ ಬೇಂದ್ರೆ ತಮ್ಮ ಕವಿತೆಯಲ್ಲಿ ಕಾಣಿಸಿರುವ ರೀತಿ ಮನಕಲಕುವಂತಿದೆ. ಇನ್ನಾದರೂ ಎಚ್ಚೆತ್ತು 'ಇರುವುದೊಂದೇ ಭೂಮಿ'ಯನ್ನು ರಕ್ಷಿಸಿ, ಉಳಿಸಿಕೊಳ್ಳಬೇಕಾದ ತುರ್ತು ಮತ್ತು ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ.

ಚಿಗರಿಗಂಗಳ ಚೆಲುವಿ, ಚೆದರಿ ನಿಂತಾಳ ನೋಡೋ ಬೆದರಿ ನಿಂತಾಳ
॥ಪಲ್ಲವಿ॥

ಹೊಳಿಹಳ್ಳ ತೊರೆದಾವೋ  
ಆಗದವರ ಹೊಟ್ಟಿ ಉರದಾವೋ  
ಗೆಣೆಯ ಉರದಾವ  
ಅಂಥವರ ದಿಟ್ಟಿ ಮನಿ ಮುರದಾವ;  
ಅದನ ತಾ ಕಂಡು ಕೊರಗ್ಯಾಳೊ  
ಮರುಗ್ಯಾಳೋ  
ಸೊರಗ್ಯಾಳೋ  
ಹೂ ಕಾಯಿ ಹಣ್ಣು ತುಂಬಿದ ಬನದಾಗ ॥ಚಿಗರಿಗಂಗಳ....

ಬ್ಯಾಟಿ ನಾಯೊದರಾವೋ  
ಹಸುಜೀವ ಬೆದರ್ಯಾವೋ  
ಗಳಗಳನೆ ಗಿಡದೇಲಿ ಉದರ್ಯಾವೋ  
ಗೆಣೆಯಾ ಉದರ್ಯಾವ  
ದಿನ್ನಿ ಮಡ್ಡಿ ಗುಡ್ಡ ಅದರ್ಯಾವ;  
ಅದನ ತಾ ಕಂಡು ನೊಂದಾಳೊ  
ಬೆಂದಾಳೊ

ಅಂದಾಳೊ
ಇದು ಎಂಥಾ ಜೀವದ ಬ್ಯಾಟಿ ಹಾಡೇ ಹಗಲೆ ॥ ಚಿಗರಿಗಂಗಳ....

ಆಳುಗಳ ಹೋರಾಟ
ಆಳುವವರಿಗೆ ಆಟ
ಗಾಳಕ್ಕ ಸಿಕ್ಕ ಮೀನದ ಗೋಳಾಟೋ
ಗೆಣೆಯಾ ಗೋಳಾಟಾ
ಗೆದ್ದವರ ಇದ್ದವರ ಹಾರಾಟೋ;
ಅರೆಸತ್ತ ಜೀವಾ ಕೊಳೆತಾವೊ
ಹುಳತಾವೊ
ಅಳತಾವೊ
ಹಸುಗೂಸು ತಿರುಗಿ ಹೊಟ್ಟ್ಯಾಗ ಹುಗಿದ್ದಾಂಗ ॥ಚಿಗರಿಗಂಗಳ....

ತನ್ನತ್ತಾ ಸುತ್ತ್ಯಾಳೊ
ಹೊತ್ತಿನ ಬೆನ್ಹತ್ತ್ಯಾಳೊ
ತಿಂಗಳಿನ ಬಗಲಾಗೆತ್ತ್ಯಾಳೊ
ಗೆಣೆಯಾ ಎತ್ತ್ಯಾಳೋ
ಉಕ್ಕುಕ್ಕುವ ದುಃಖ ಒಳಗೊತ್ತ್ಯಾಳೊ;
ನಿಂತ ನೆಲವೆಂದು ಕಡಿಲಾಕೊ
ಹಡಿಲಾಕೊ
ಒಡಿಲಾಕೊ
ಒಡೆವ್ಯಲ್ಲೋ ಮಗನೆ ಉಸಿರಿದ್ದೊಡಲಂತಾಳೊ ॥ಚಿಗರಿಗಂಗಳ....

## ಕವಿ ಪರಿಚಯ

**ದ.ರಾ. ಬೇಂದ್ರೆ :** ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕಾವ್ಯನಾಮ 'ಅಂಬಿಕಾತನಯದತ್ತ'. ಧಾರವಾಡ ಇವರ ಹುಟ್ಟೂರು. ಧಾರವಾಡದ ಆಕಾಶವಾಣಿ ಕೇಂದ್ರದ ಸಲಹೆಗಾರರಾಗಿ ಹೈಸ್ಕೂಲು, ಹಾಗೂ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಜಯ ಕರ್ನಾಟಕ, ಜೀವನ ಪತ್ರಿಕೆಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರ ಕೆಲವು ಕವನ ಸಂಕಲನಗಳು: ಗರಿ, ಸಖೀಗೀತ, ಉಯ್ಯಾಲೆ, ನಾದಲೀಲೆ, ಅರಳು ಮರಳು, ಗಂಗಾವತರಣ, ನಾಕುತಂತಿ, ಕೃಷ್ಣಕುಮಾರಿ, ಚೈತ್ಯಾಕ್ಷಿ, ಮತ್ತೆ ಬಂತು ಶ್ರಾವಣಾ, ಕರುಳಿನ ವಚನಗಳು.



ನಾಟಕಗಳು: ಸಾಯೋ ಆಟ, ದೆವ್ವದ ಮನೆ, ಜಾತ್ರೆ, ಮಂದಿ ಮನೆ, ಮಂದಿ ಮದಿವಿ, ಗೋಲ್, ತಿರುಕರ ಪಿಡುಗು ಮೊದಲಾದುವು; ನಿರಾಭರಣ ಸುಂದರಿ, ಮಾತೆಲ್ಲಾ ಜ್ಯೋತಿ ಇವರ ಸಣ್ಣ ಕಥೆಗಳಾದರೆ, ಟ್ಯಾಗೂರರ ನೂರೊಂದು ಕವನ, ಕಬೀರ ವಚನಾವಳಿ, ಚೀನಾದ ಬಾಳು ಬದುಕು, ಕನ್ನಡ ಮೇಘದೂತ ಇವು ಅವರ ಕೆಲವು ಅನುವಾದಗಳು. ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯ ಸಂಶೋಧನೆ ಸಾಹಿತ್ಯದ ವಿರಾಟ್ ಸ್ವರೂಪ – ವಿಮರ್ಶಾ ಕೃತಿಗಳು.

ಮೈಸೂರು, ಕರ್ನಾಟಕ ಹಾಗೂ ಕಾಶಿ ವಿಶ್ವವಿದ್ಯಾಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿವೆ. ೧೯೪೩ರಲ್ಲಿ ಶಿವಮೊಗ್ಗದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ವಹಿಸಿದ್ದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಳ್ಕರ್ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ – ಹೀಗೆ ಹಲವು ಪ್ರಶಸ್ತಿಗಳು ಲಭಿಸಿವೆ.

**ಪ್ರಶ್ನೆಗಳು :**

೧. 'ಚಿಗರಿಗಂಗಳ ಚೆಲುವಿ' ಕವಿತೆಯಲ್ಲಿ ನಿರೂಪಿತವಾಗಿರುವ ಬೇಟೆಯ ರೂಪಗಳು ಯಾವುವು?

೨. ಮನುಷ್ಯರು ಭೂಮಿಯ ಮೇಲೆ ನಡೆಸುತ್ತಿರುವ ನಿರಂತರ ದಾಳಿ ಸರಿಯೇ? ಚರ್ಚಿಸಿ.

೩. ಕವಿತೆಯಲ್ಲಿರುವ ತಲ್ಲಣದ ಸ್ವರೂಪವನ್ನು ಕುರಿತು ಬರೆಯಿರಿ.

೪. ಕವಿತೆಯಲ್ಲಿನ ಸಂಕಟ ನಿಮ್ಮದೂ ಹೌದಾ? ಹಾಗಾದರೆ ಪ್ರಕೃತಿ ಮತ್ತು ಮನುಷ್ಯರ ಸಂಬಂಧ ಹೇಗಿರಬೇಕೆಂದು ಬಯಸುತ್ತೀರಿ?

೫. "ಮನುಷ್ಯರ ಆಧುನಿಕ ಜೀವನ ಕ್ರಮಕ್ಕೆ ಪರಿಸರ ನಾಶ ಅನಿವಾರ್ಯ"– ಈ ಹೇಳಿಕೆಗೆ ನಿಮ್ಮ ಅಭಿಪ್ರಾಯಗಳೇನು?

೬. ಪ್ರಕೃತಿ ಮತ್ತು ಮನುಷ್ಯರ ನಡುವಿನ ಸಂಘರ್ಷ ಕವಿತೆಯಲ್ಲಿ ವ್ಯಕ್ತಗೊಂಡಿರುವ ಬಗೆ.

೭. ನೀವು ನೋಡಿರುವ ಪರಿಸರನಾಶವನ್ನು ಕುರಿತು ಪ್ರಬಂಧ ಬರೆಯಿರಿ.

೮. ಭೂಮಿಯನ್ನು ಹೆಣ್ಣಾಗಿ ಪರಿಭಾವಿಸುವುದು ಯಾಕೆ? ಸರಿಯೆ? ಚರ್ಚಿಸಿ.

*

# ೪. ಕುರಿಗಳು, ಸಾರ್, ಕುರಿಗಳು.

**– ಕೆ.ಎಸ್. ನಿಸಾರ್ ಅಹಮದ್**

**ಆಶಯ :**

ಪ್ರಜಾಪ್ರಭುತ್ವವೆಂದರೆ 'for the people, by the people, of the people', ಎಂಬ ವ್ಯಾಖ್ಯಾನವಿದೆ. ಪ್ರಪಂಚದಲ್ಲೆ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ನಮ್ಮಲ್ಲಿ ಅದು ಅನೇಕ ವೇಳೆ ಪ್ರಜೆಗಳ ಪಾಲಿಗೆ 'far, buy, off' ಗಳಾಗಿರುವ ಸಾಧ್ಯತೆಯನ್ನು ಕಡೆಗಣಿಸುವಂತಿಲ್ಲ. ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಯಬೇಕಾದ ಪ್ರಭುತ್ವ ಕುರಿ ಮತ್ತು ಕೆಟ್ಟ ಕುರುಬನ ಸಂಬಂಧವಾಗಿಬಿಟ್ಟರೆ ಆಗ ದಬ್ಬಾಳಿಕೆಯಲ್ಲದೆ ಸಮಾನತೆ ಎಲ್ಲಿಯದು? ಕುರಿಗಳಂತು ಕನ್ನಡಿಯ ಗಂಟನ್ನು ನೆಚ್ಚಿಕೊಂಡು ಹೇಗೊ ಕಾಲ ದೂಡುತ್ತಿವೆ. ಕುರಿಗಳ ಸುಖದುಃಖಗಳನ್ನು ನೋಡದ, ಅದು ಸತ್ತರೂ ತನ್ನ ಲೋಲುಪತೆಯಲ್ಲೆ ಮಗ್ನವಾಗಿರುವ, ಅದನ್ನೆ ಬಲಿಕೊಟ್ಟು ತನಗೆ ಬೇಕಾದದ್ದನ್ನು ಜೊಲ್ಲು ಸುರಿಸಿ ಪಡೆದುಕೊಳ್ಳುವ, ಕಡುಧೂರ್ತತೆಯ 'ಪ್ರಭುತೆ' ಇಲ್ಲಿ ವರ್ಣರಂಜಿತವಾಗಿ ಚಿತ್ರಿತವಾಗಿದೆ. ಕನ್ನಡದ ಪ್ರಖ್ಯಾತ ನವ್ಯಕವನವಾದ ಇದು 'ಕುರಿಗಳು' ಎನ್ನುವ ರೂಪಕವನ್ನು ನಮ್ಮ ವ್ಯವಸ್ಥೆಯಲ್ಲಿ ಕಾಣೆಯಾಗಿರುವ 'ಎಚ್ಚರ'ದ ಬಗೆಗಿನ ತೀವ್ರ ವಿಡಂಬನೆಯಾಗಿ ಬಳಸಿರುವುದನ್ನು ಗಮನಿಸಬಹುದು.

ಕುರಿಗಳು, ಸಾರ್, ಕುರಿಗಳು :
ಸಾಗಿದ್ದೇ
ಗುರಿಗಳು.
ಮಂದೆಯಲ್ಲಿ ಒಂದಾಗಿ, ಸ್ವಂತತೆಯೇ ಬಂದಾಗಿ
ಇದರ ಬಾಲ ಅದು, ಮತ್ತೆ ಅದರ ಬಾಲ ಇದು ಮೂಸಿ,
ದನಿ ಕುಗ್ಗಿಸಿ, ತಲೆ ತಗ್ಗಿಸಿ
ಹುಡುಕಿ ಹುಲ್ಲು ಕಡ್ಡಿ ಮೇವು, ಅಂಡಲೆಯುವ ನಾವು, ನೀವು,
ಕುರಿಗಳು, ಸಾರ್, ಕುರಿಗಳು.
ನಮಗೊ ನೂರು ಗುರಿಗಳು
ಎಡದಿಕ್ಕಿಗೆ, ಬಲದಿಕ್ಕಿಗೆ, ಒಮ್ಮೆ ದಿಕ್ಕುಪಾಲಾಗಿ,



ಒಮ್ಮೆ ಅದೂ ಕಳೆದುಕೊಂಡು ತಾಟಸ್ಥ್ಯದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತಿರುವ,
ಬರೀ ಕಿರುಚಿ ರೇಗುತಿರುವ,
ನೊಣ ಕೂತರೆ ಬಾಗುತಿರುವ,
ತಿನದಿದ್ದರು ತೇಗುತಿರುವ,
ಹಿಂದೆ ಬಂದರೊದೆಯದ, ಮುಂದೆ ಬರಲು ಹಾಯದ
ಅವರು, ಇವರು, ನಾವುಗಳು
ಕುರಿಗಳು, ಸಾರ್, ಕುರಿಗಳು :

ಮಂದೆಯಲ್ಲಿ ಎಲ್ಲವೊಂದೆ ಆದಾಗಲೇ ಸ್ವರ್ಗ ಮುಂದೆ :
ಅದಕಿಲ್ಲವೆ ನಾವುತ್ತರ?
ಮೆದುಳಿನಲ್ಲಿ ತಗ್ಗೆತ್ತರ,
ಹಿರಿದು, ಕಿರಿದು ಮಾಯಿಸಿ,
ಒಬ್ಬೊಬ್ಬರಿಗಿರುವ ಮೆದುಳ ಸ್ವಾರ್ಥದ ಉಪಯೋಗದಿಂದ
ಇಡಿ ಮಂದೆಗೆ ಹಾಯಿಸಿ,
ಹೊಟ್ಟೆ ಬಟ್ಟೆಗೊಗ್ಗದಂಥ ಕಲೆಯ ಕರ್ಮಕಿಳಿಯದಂತೆ
ತಲೆಬೆಲೆಯ ಸುಧಾರಿಸಿ,
ಬಿಳಿಕಪ್ಪಿನ ದ್ವಂದ್ವಗಳಿಗೆ ಮಾಡಿಸಿ ಸಮಜಾಯಿಷಿ,
ನಮ್ಮ ಮೆದುಳು ಶುದ್ಧಿಯಾಗಿ, ಬುದ್ಧಿ ನಿರ್ಬುದ್ಧಿಯಾಗಿ,
ಕೆಂಬಣ್ಣವನೊಂದೆ ಪೂಸಿ,
ಅದರ ಬಾಲ ಇದು, ಮತ್ತೆ ಇದರ ಬಾಲ ಅದು ಮೂಸಿ
ನಡೆವ ನಮ್ಮೊಳೆಲ್ಲಿ ಬಿರುಕು?

ನಮ್ಮ ಕಾಯ್ವ ಕುರುಬರು :
ಪುಟಗೋಸಿಯ ಮೊನ್ನೆ ತಾನೆ ಕಿತ್ತು ಪಂಚೆಯುಟ್ಟವರು,
ಶಾನುಭೋಗ ಗೀಚಿದಕ್ಕೆ ಹೆಬ್ಬೆಟ್ಟನು ಒತ್ತುವವರು,
ಜಮಾಬಂದಿಗಮಲ್ದಾರ ಬರಲು ನಮ್ಮೊಳೊಬ್ಬ ನನ್ನ
ಮೆಚ್ಚಿ, ಮಸೆದ ಮಚ್ಚ ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
ಬಿರಿಯಾನಿಯ ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ
ಕಿಸೆಗೆ ಹಸಿರುನೋಟು ತುರುಕಿ, ನುಡಿಗೆ ಬೆಣ್ಣೆ ಹಚ್ಚುವವರು.
ಬಿಸಿಲಿನಲ್ಲಿ ನಮ್ಮ ದೂಡಿ, ಮರದಡಿಯಲಿ ತಾವು ಕೂತು

ಮಾತು, ಮಾತು, ಮಾತು, ಮಾತು
ಮಾತಿನ ಗೈರತ್ತಿನಲ್ಲೆ ಕರಾಮತ್ತು ನಡೆಸುವವರು.
ನಮ್ಮ ಮೈಯ ತುಪ್ಪಟವ ರವಷ್ಟು ಬಿಡದಹಾಗೆ ಸವರಿ
ಕಂಬಳಿಗಳ ನೇಯುವಂಥ ಯೋಜನೆಗಳ ಹಾಕುವವರು.
ಮಾರಮ್ಮನ ಮುಡಿಗೆ ಕೆಂಪು ದಾಸವಾಳ ಆಯುವವರು.
ಬೆಟ್ಟ ದಾಟಿ ಕಿರುಬ ನುಗ್ಗಿ, ನಮ್ಮೊಳಿಬ್ಬರನ್ನ ಮುಗಿಸಿ
ನಾವು 'ಬ್ಯಾ, ಬ್ಯಾ' ಎಂದು ಬಾಯಿಬಾಯಿ ಬಡಿದುಕೊಂಡು
ಬೊಬ್ಬೆ ಹಾಕುತ್ತಿದ್ದರೂ
ಚಕ್ಕಭಾರ ಆಟದಲ್ಲೆ ಮಗ್ನರು ಇವರೆಲ್ಲರು
ನಮ್ಮ ಕಾಯ್ವ ಗೊಲ್ಲರು.

ದೊಡ್ಡಿಯಲ್ಲಿ ಕೂಡಿಹಾಕಿ ನಿಲ್ಲಲಿಲ್ಲ, ಕೂರಲಿಲ್ಲ,
ಎದ್ದರೆ ಸರಿದಾಡಲಿಲ್ಲ, ಬಿದ್ದರೆ ಹರಿದಾಡಲಿಲ್ಲ,
ದೀಪದ ದೌಲತ್ತು ಇಲ್ಲ,
ಗಾಳಿಯ ಗಮ್ಮತ್ತು ಇಲ್ಲ,
ಕಿಂಡಿಯಿಂದ ತೆವಳಿಬಂದ ಗಾಳಿ ಕೂಡ ನಮ್ಮದೇನೆ :
ನಮ್ಮ ಮುಂದೆ ಕುರಿಯ ಸುಲಿದು, ಆಚೆ ಅಲ್ಲಿ ಉಪ್ಪು ಸವರಿ
ಒಣಗಲಿಟ್ಟ ಹಸಿತೊಗಲಿನ ಬಿಸಿಬಿಸಿ ಹಬೆವಾಸನೆ,
ಇರಿಯುತಿಹುದು ಮೂಗನೆ!
ಕೊಬ್ಬಿರುವೀ ಮಬ್ಬಿನಲ್ಲಿ, ಮೈನಾತದ ಗಬ್ಬಿನಲ್ಲಿ
ಇದರ ಉಸಿರು ಅದು, ಮತ್ತೆ ಅದರ ಉಸಿರು ಇದು ಮೂಸಿ
ಹೇಸಿದರು ನಿಭಾಯಿಸಿ,
ತಾಳ್ಮೆಯನೆ ದಬಾಯಿಸಿ,
ನಮ್ಮನಾವೆ ಅಂದುಕೊಂಡೊ, ಉಗುಳುನುಂಗಿ ನೊಂದುಕೊಂಡೊ,
ನಂಬಿಕೊಂಡು ಏಗುತಿರುವ ನಾವು, ನೀವು, ಇಡೀ ಹಿಂಡು
ಕುರಿಗಳು, ಸಾರ್, ಕುರಿಗಳು.

ತಳವೂರಿನ ಕುರುಬ ಕಟುಕನಾದ; ಅವನ ಮಚ್ಚೊ ಆಹ!
ಏನು ಝಳಪು, ಏನು ಹೊಳಪು, ಏನು ಜಾದು, ಏನು ಮೋಹ!
ಆ ಹೊಳಪಿಗೆ ದಂಗಾಗಿ, ಕಣ್ಣಿಗದೇ ರಂಗಾಗಿ,
ಒಳಗೊಳಗೇ ಜಂಗಾಗಿ



ಕಣ್ಣುಕುಕ್ಕಿ, ಸೊಕ್ಕಿರುವ, ಹೋಗಿಹೋಗಿ ನೆಕ್ಕಿರುವ,
ಕತ್ತನದಕೆ ತಿಕ್ಕಿರುವ,
ನಾವು, ನೀವು, ಅವರು ಇವರು
ಕುರಿಗಳು, ಸಾರ್, ಕುರಿಗಳು !
ಮಚ್ಚಿನ ಆ ಮೆಚ್ಚಿನಲ್ಲಿ, ಅದರಾಳದ ಕಿಚ್ಚಿನಲ್ಲಿ
ಮನೆ ಮಾಡಿವೆ ಹುಚ್ಚಿನಲ್ಲಿ
ನಮ್ಮೆಲ್ಲರ ಗುರಿಗಳು!

ಕುರಿಗಳು, ಸಾರ್, ಕುರಿಗಳು...............

## ಕವಿ ಪರಿಚಯ

**ಕೆ.ಎಸ್. ನಿಸಾರ್ ಅಹಮದ್ (೧೯೩೬.....):** ಬೆಂಗಳೂರು ಸಮೀಪದ ದೇವನಹಳ್ಳಿಯ ನಿಸಾರ್ ಅಹಮದ್ ಅವರು ವಿಜ್ಞಾನ ವಿಭಾಗದಲ್ಲಿ ಸ್ನಾತಕೋತ್ತರ ಪದವಿಗಳಿಸಿ, ಅನೇಕ ಸರ್ಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. 'ನಿತ್ಯೋತ್ಸವ'ದ ಕವಿಯೆಂದು ಖ್ಯಾತರಾದವರು. ಇವರ ಕೃತಿಗಳು:

* ಕವನಸಂಕಲನ : ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ಸಂಜೆ ಐದರ ವೇಳೆ, ನಾನೆಂಬ ಪರಕೀಯ, ಸ್ವಯಂ ಸೇವೆಯ ಗಿಳಿಗಳು ಇತ್ಯಾದಿ.

* ಅನುವಾದಗಳು : ಷೇಕ್ಸ್‌ಪಿಯರನ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಂ' ಮತ್ತು 'ಒಥೆಲೊ' ನಾಟಕಗಳು. ರಷ್ಯನ್ ಕಥೆಗಳ ಅನುವಾದ 'ಬರೀ ಮರ್ಯಾದಸ್ಥರೆ' ಮತ್ತು ಪಾಬ್ಲೊನೆರೂಡಾನ ಕವಿತೆಗಳು.

* ಗದ್ಯಕೃತಿಗಳು : ಇದು ಬರಿ ಬೆಡಗಲ್ಲೊ ಅಣ್ಣ, ಮನದೊಂದಿಗೆ ಮಾತುಕಥೆ, ಹಿರಿಯರು ಹರಸಿದ ಹೆದ್ದಾರಿ, ಅಚ್ಚು ಮೆಚ್ಚು ಇತ್ಯಾದಿ.

* ಭಾವಗೀತೆಗಳ ಧ್ವನಿಸುರುಳಿ – ನಿತ್ಯೋತ್ಸವ.

ನಿಸಾರರು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಡಾ. ಸಾಹಿಮ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಮತ್ತು ಬಹುಮುಖ್ಯವಾಗಿ ಪದ್ಮಶ್ರೀ ಪ್ರಶಸ್ತಿಗಳನ್ನು ಗಳಿಸಿದ್ದಾರೆ.

**ಪ್ರಶ್ನೆಗಳು :**

೧. ಕುರಿಗಳು ಎಂದರೆ ಯಾರು? ಮತ್ತು ಯಾಕೆ ?

೨. ನಾವೆಲ್ಲರೂ ಕುರಿಗಳು ಎಂದು ಕವಿ ಅಭಿಪ್ರಾಯ ಪಡಲು ಕಾರಣವೇನು?

೩. ಕುರಿಗಳನ್ನು ಕಾಯುತ್ತಿರುವ ಕುರುಬನ ಮನಃಸ್ಥಿತಿ ಹೇಗಿದೆ?

೪. ಕುರಿ ಮತ್ತು ಕುರುಬನ ಸಂಬಂಧದ ಸ್ವರೂಪವೇನು?

೫. ನಮ್ಮ ವ್ಯವಸ್ಥೆಯ ವಿಡಂಬನೆ ಕವಿತೆಯಲ್ಲಿ ಹೇಗೆ ಮೂಡಿದೆ

೬. ನೀವು ಕುರಿಗಳು ಎಂಬುದನ್ನು ಒಪ್ಪುವಿರಾ? ಅಲ್ಲವೆಂದರೆ ಹೇಗೆ?

೭. ಕುರಿಗಳಾಗದೆ ಬದುಕುವುದು ಸಾಧ್ಯವೆ? ವಿವೇಚಿಸಿ.

*